**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಶಿಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) ಇವರು ಶೂನ್ಯ ವೇಳೆ ಸೂಚನಾ ಪತ್ರಕ್ಕೆ ಉತ್ತರ:-**

**ವಿಷಯ:-**

ದಿನಾಂಕ: 05.03.2025 ರ ಪ್ರಜಾವಾಣಿ ದಿನಪತ್ರಿಕೆಯಲ್ಲಿ ಪ್ರಕಟವಾಗಿರುವಂತೆ ಕಲ್ಯಾಣ ಕರ್ನಾಟಕ ಭಾಗದ ಹಾಗೂ ರಾಜ್ಯದಾದ್ಯಂತ ಅದೆಷ್ಟೋ ಶಾಲೆಗಳು ಶಿಕ್ಷಕರ ಕೊರತೆಯನ್ನು ಎದುರಿಸುತ್ತಿವೆ. ಶಿಕ್ಷಕರ ಕೊರತೆ' ನೀಗಿಸಬೇಕು, ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಶಿಕ್ಷಣ ಇಲಾಖೆ ಹಲವಾರು ಕ್ರಮ ತೆಗೆದುಕೊಳ್ಳುತ್ತದೆ. ಹಾಗೂ ಸರ್ಕಾರ ಅತಿಥಿ ಶಿಕ್ಷಕರ ಹುದ್ದೆಗಳ ಭರ್ತಿ ಮಾಡಿಕೊಂಡಿದ್ದು ಖುಷಿಯ ವಿಚಾರ. ಆದರೆ ಕಳೆದ 6-7 ತಿಂಗಳಿಂದ ಇಲ್ಲಿಯವರೆಗೆ ಆ ಶಿಕ್ಷಕರಿಗೆ ವೇತನ ನೀಡದೆ ಇರುವುದು ವಿಪರ್ಯಾಸದ ಸಂಗತಿ ಅದೆಷ್ಟೋ ಅತಿಥಿ ಶಿಕ್ಷಕರು ದೂರದ ಪ್ರದೇಶದಿಂದ ಶಾಲೆಗಳಿಗೆ ಶಿಕ್ಷಣ ನೀಡಲು ದಿನಂಪ್ರತಿ ಬರುತ್ತಾರೆ ಆದರೆ ಅಂತಹ ಶಿಕ್ಷಕರಿಗೆ ವೇತನ ನೀಡದೆ ವಿಳಂಬ ಮಾಡಿತ್ತಿರುವುದರಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ. ಜುಲೈ ಮತ್ತು ಡಿಸೆಂಬರ್ ತಿಂಗಳಲ್ಲಿ ಎರಡು ಹಂತದಲ್ಲಿ ಶಿಕ್ಷಕರ ನೇಮಕಾತಿ ನಡೆದಿದೆ. ಆದರೆ ಯಾವೊಬ್ಬರ ಶಿಕ್ಷಕರಿಗೂ ಸರ್ಕಾರದಿಂದ ಇಲ್ಲಿಯವರೆಗೂ ಒಂದು ರೂ. ಸಂಬಳ ದೊರೆತಿಲ್ಲ.

ಈ ಮುಂಚೆ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಿಕ್ಷಕರಿಲ್ಲದ ಕಾರಣ ವಿದ್ಯಾರ್ಥಿಗಳು ಸಮರ್ಥ ಪಾಠ ಬೋಧನೆಯಿಂದ ವಂಚಿತರಾಗುತ್ತಿದ್ದರು. ಸರ್ಕಾರ ಅತಿಥಿ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿದ್ದರಿಂದ ಶಾಲೆಗಳಲ್ಲಿ ತರಗತಿಗಳು ಸರಾಗವಾಗಿ ನಡೆಯಲು ಅನುಕೂಲವಾಯಿತು. ಕಾರಣ ಸಮಸ್ಯೆ ಇತ್ಯರ್ಥಗೊಳಿಸಿದ ಅತಿಥಿ ಶಿಕ್ಷಕರಿಗೆ ಸಮಯಕ್ಕೆ ಸರಿಯಾಗಿ ವೇತನ ನೀಡುವುದು ಮುಖ್ಯವಾಗಿದೆ. ನಿಯಮದಂತೆ ಜಿಲ್ಲಾ ಪಂಚಾಯತ್ ಅನುದಾನದಿಂದ ಪ್ರಾಥಮಿಕ ಶಾಲಾ ಶಿಕ್ಷಕರಿಗೆ 10,000 ಹಾಗೂ ಪ್ರೌಢ ಶಾಲಾ ಶಿಕ್ಷಕರಿಗೆ 10,500 ರೂಪಾಯಿ ಪ್ರತಿ ತಿಂಗಳು ವೇತನ ಪಾವತಿಯಾಗಬೇಕು. ಕಳೆದ 7 ತಿಂಗಳಿಂದ ತಡವಾಗಿ ವೇತನ ನೀಡಲಾಗುತ್ತಿದೆ ಎಂಬ ಗೋಳು ಮುಂದುವರೆದಿದೆ. ಒಮ್ಮೆ ಅನುದಾನ ಇರುವುದಿಲ್ಲ. ಬಂದರೂ ತಡವಾಗಿ ಬರುತ್ತದೆ. ನಂತರ ಬಿಇಒ ಕಛೇರಿ ಅಧಿಕಾರಿಗಳು ಆಯಾ ಶಾಲೆಯ ಎಚ್‌ಎಂ ಗಳಿಂದ ಶಿಕ್ಷಕರ ಹಾಜರಾತಿ ತರಿಸಿಕೊಂಡು ವೇತನದ ಬಿಲ್ ರೆಡಿ ಮಾಡಿ ಉಪ ಖಜಾನೆಗೆ ಕಳುಹಿಸಬೇಕು. ಅದು ಅಲ್ಲಿಂದ ಪಾಸಾದ ಬಳಿಕ ಆ ಸಂಬಳವನ್ನು ಆಯಾ ಶಾಲೆಯ ಮುಖ್ಯಗುರುಗಳ ಖಾತೆಗೆ ಜಮಾ ಮಾಡಿದ ಬಳಿಕ ಅವರು ಶಿಕ್ಷಕರ ಹೆಸರಿನ ಮೇಲೆ ಚೆಕ್ ನೀಡುತ್ತಾರೆ. ನಂತರ ಸಂಬಳ ದೊರೆಯುತ್ತದೆ. ಹೀಗಾಗಿ ಅತಿಥಿ ಶಿಕ್ಷಕರ ವೇತನ ಪ್ರತಿ ವರ್ಷ ತಡವಾಗಿಯೇ ಸಿಗುತ್ತಿದೆ.

**ಉತ್ತರ:-**

ರಾಜ್ಯದ ಸರ್ಕಾರಿ ಪ್ರಾಥಮಿಕ/ ಪ್ರೌಢಶಾಲೆಗಳಲ್ಲಿ ಮಂಜೂರಾದ ಬೋಧಕ ವೃಂದದ ಖಾಲಿ ಹುದ್ದೆಗಳಿಗೆ ಎದುರಾಗಿ ಕೆಳಕಂಡಂತೆ ನೇಮಕಾತಿ ಮಾಡಿಕೊಳ್ಳಲಾಗಿದೆ.

| ಕ್ರಮ ಸಂಖ್ಯೆ | ಶಾಲೆಗಳ ವಿಧ | ಪ್ರಥಮ ಹಂತ ಅತಿಥಿ ಶಿಕ್ಷಕರ ನೇಮಕ | ಬಿಡುಗಡೆ ಯಾದ ಅನುದಾನ ರೂ ಲಕ್ಷಗಳಲ್ಲಿ | 2ನೇ ಹಂತ ಅತಿಥಿ ಶಿಕ್ಷಕರ ನೇಮಕ | ಬಿಡುಗಡೆಯಾದ ಅನುದಾನ ರೂ ಲಕ್ಷಗಳಲ್ಲಿ |
|---|---|---|---|---|---|
| 1. | ಸರ್ಕಾರಿ ಪ್ರಾಥಮಿಕ ಶಾಲೆಗಳು | 34192 | 24941.25 | 808 | 8697.09 |
| 2. | ಸರ್ಕಾರಿ ಪ್ರೌಢಶಾಲೆಗಳು | 8954 | 2820.51 | 144 | 6732.51 |
| | **ಒಟ್ಟು** | **43146** | **27761.76** | **952** | **15429.6** |

ಅತಿಥಿ ಶಿಕ್ಷಕರ ಗೌರವ ಸಂಭಾವನೆಯನ್ನು ಪಾವತಿಸಲು ಆರ್ಥಿಕ ಇಲಾಖೆಯಿಂದ ನೇರವಾಗಿ ಸಂಬಂಧಪಟ್ಟ ತಾಲ್ಲೂಕು ಪಂಚಾಯ್ತಿಗಳಿಗೆ ಈಗಾಗಲೇ ಬಿಡುಗಡೆಯಾಗಿರುತ್ತದೆ. ಅದರಂತೆ ಈಗಾಗಲೇ ಅತಿಥಿ ಶಿಕ್ಷಕರ ಗೌರವ ಸಂಭಾವನೆಯನ್ನು ಕೆ-2 ಮೂಲಕ ಫೆಬ್ರವರಿ -2025 ರವರೆಗೆ ಅತಿಥಿ ಶಿಕ್ಷಕರ ಬ್ಯಾಂಕ್ ಖಾತೆ ಜಮಾ ಮಾಡಲು ಕ್ರಮವಹಿಸಲಾಗುತ್ತಿದೆ.

ಸರ್ಕಾರ ಆದೇಶ ಸಂಖ್ಯೆ ಆಇ 2 ಬಿಪಿಇ 2025 ದಿನಾಂಕ 27.02.2025 ಆದೇಶಾನುಸಾರ 2025 ನೇ ಸಾಲಿಗೆ ಸಂಬಂಧಿಸಿದಂತೆ ಗೌರವ ಸಂಭಾವನೆ ಬಿಲ್ಲನ್ನು ಏಪ್ರಿಲ್ 2025 ಮಾಹೆಯಲ್ಲಿ ತೀರುವಳಿಗೊಳಿಸಿ ಸೂಚಿಸಿರುವಂತೆ ಪಾವತಿಸಲು ಕ್ರಮವಹಿಸಲಾಗುತ್ತಿದೆ.

**ಇಪಿ 86 ಎಸ್‌ಇಎಸ್ 2025**

**(ಎಸ್. ಮಧು ಬಂಗಾರಪ್ಪ)**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ**
**ಸಚಿವರು.**